## 'ಕ್ಲೀಯರ್' ಅಪ್ಲಿಕೇಶನ್

ಕಾರ್ಯಭಾರಗಳನ್ನು ನೆನಪಿಟ್ಟುಕೊಳ್ಳಲು 'ಟಾಸ್ಕ್' ಅಪ್ಲಿಕೇಶನ್ ಎಲ್ಲಾ ಮೊಬೈಲ್ ಫೋನ್‌ಗಳಲ್ಲಿದ್ದರೂ ಅವು ಸಿದ್ಧ ವಾಕ್ಯಗಳು. ಆದರೆ ಐ-ಫೋನ್ ಫೋರ್‌ಎಸ್‌ನಲ್ಲಿರುವ ಕ್ಲೀಯರ್ ಅಪ್ಲಿಕೇಶನ್ ಬಳಕೆ ಮಾಡಲು ತೀರಾ ಸರಳ. ನೀವೇ ಸೃಷ್ಟಿ ಮಾಡಬಹುದು. ನೆನಪಿಟ್ಟುಕೊಳ್ಳಲು ಇನ್ನೊಂದು ಅಪ್ಲಿಕೇಶನ್ ಬೇಕಾಗಿಲ್ಲ. ಗರಿಷ್ಠ 28 ಅಕ್ಷರಗಳನ್ನು ಟೈಪ್ ಮಾಡಬಹುದು. ಇದು ಪಟ್ಟಿಗೆ ಸೇರುತ್ತದೆ. ಉದಾಹರಣೆಗೆ 'ನಾಳೆ ನಾನು ಎರಡು ಲೀಟರ್ ಹಾಲನ್ನು ತರಬೇಕು' ಎಂದು ಟೈಪ್ ಮಾಡಿದರೆ ಆಯಿತು. ಅದು ಆ ದಿನದ ದಿನಾಂಕವನ್ನು ನೆನಪಿಟ್ಟುಕೊಂಡು ನಿಮಗೆ ನೆನಪು ಮಾಡಲು ಅಲಾರ್ಮ್ ಮೊಳಗಿಸುತ್ತದೆ.

ಹೊಸ ಕಾರ್ಯವನ್ನು ಟೈಪ್ ಮಾಡಬೇಕಾ? ಸ್ಕ್ರೀನ್ ಮೇಲೆ ಬೆರಳಿನಿಂದ ಕುಟ್ಟಿ. ಅಳಿಸಬೇಕಾ? ಬೆರಳನ್ನು ಬರೆದಿರುವುದರ ಮೇಲಿಟ್ಟು ಬಲಗಡೆ ತಳ್ಳಿದರೆ ಆಯಿತು. ಪಟ್ಟಿಗೆ ಸೇರಿಸುವುದಾದರೆ ಬೆರಳಿನಿಂದ ಎಡಕ್ಕೆ ತಳ್ಳಿ. ಸಮಯವಿದ್ದರೆ ಬಣ್ಣ ತುಂಬಿ. ಸಂಗೀತ ಸೇರಿಸಿ. ಜೊತೆಗೆ ಆ ಕೆಲಸದ ಕುರಿತಂತೆ ಖ್ಯಾತನಾಮರ ಹೇಳಿಕೆಗಳನ್ನು ಕೂಡಾ ನೀವು ಜೊತೆಗೆ ನೋಡಬಹುದು.

## ಫೋಟೋಗೆ ವಿಶೇಷ ಎಫೆಕ್ಟ್‌ಗಳು






ಆ್ಯಂಡ್ರಾಯ್ಡ್‌ನಲ್ಲಿ ಫೋಟೊ ತೆಗೆಯುವ ಹವ್ಯಾಸವಿದೆಯಾ? ಈ ಫೋಟೋಗೆ ವಿಶೇಷ ಪರಿಣಾಮಗಳನ್ನು ಸೇರಿಸಬಹುದು. ಇದಕ್ಕೆ ಬೇಕಾಗಿರುವ ಅಪ್ಲಿಕೇಶನ್ ಪಿಕ್ಸ್‌ಎಲ್‌ಆರ್-ಒ-ಮ್ಯಾಟಿಕ್. ಅಪ್ಲಿಕೇಶನ್‌ನಲ್ಲಿರುವ ಕ್ಯಾಮೆರಾ ಆಯ್ಕೆ ಮಾಡಿ ಫೋಟೊ ತೆಗೆಯಬಹುದು ಅಥವಾ ನಿಮ್ಮ ಫೋನ್‌ನಲ್ಲಿ ಈಗಾಗಲೇ ಸಂಗ್ರಹಿಸಿರುವ ಫೋಟೊ ಆಯ್ಕೆ ಮಾಡಿಕೊಳ್ಳಬಹುದು. ಎಡಿಟಿಂಗ್‌ನಲ್ಲಿ ಮೂರು ವಿಭಾಗಗಳಿವೆ- ಓವರ್‌ಲೇಸ್, ಎಫೆಕ್ಟ್ಸ್ ಮತ್ತು ಫ್ರೇಮ್ಸ್.

ಓವರ್‌ಲೇಸ್‌ನಿಂದ ವಿವಿಧ ಬಣ್ಣಗಳನ್ನು ಆಯ್ಕೆ ಮಾಡಿ ಫೋಟೋಗೆ ಸೇರಿಸಬಹುದು. ಇದರಲ್ಲಿ ಬೆಳಕಿನ ವಿನ್ಯಾಸವೂ ಬಹು ಮುಖ್ಯ. ಎಫೆಕ್ಟ್‌ನಲ್ಲಿ ನಕ್ಷತ್ರ, ಮಿಂಚು, ಕಿಡಿಗಳನ್ನು ಸೇರಿಸಬಹುದು. ಫ್ರೇಮ್ ಅಂತೂ ಗೊತ್ತೇ ಇದೆ. ಪೊಲರೈಡ್ ಫ್ರೇಮ್ ಕೊಡಬಹುದು ಅಥವಾ ಹಳೆಯದಾಗಿ ಕಾಣುವಂತೆ ಮಾಡಬಹುದು. ಪ್ರತಿಯೊಂದು ವಿಭಾಗದಲ್ಲೂ ಹತ್ತಾರು ಆಯ್ಕೆಗಳಿವೆ. ಇವನ್ನೆಲ್ಲಾ ಹುಡುಕಲು ಬೇಸರವಾದರೆ ರ್‍ಯಾಂಡಮೈಜರ್ ಮೇಲೆ ಕ್ಲಿಕ್ ಮಾಡಿ. ಫೋಟೋಗೆ ಹೊಂದುವ ಎಲ್ಲವನ್ನೂ ನೀಟಾಗಿ ಮಾಡಿಕೊಡುತ್ತದೆ.

ಈ ಅಪ್ಲಿಕೇಶನ್‌ನಿಂದಲೇ ಸಾಮಾಜಿಕ ಜಾಲತಾಣಗಳಿಗೂ ಫೋಟೊ ಕಳುಹಿಸಬಹುದು.

## ಆರಾಮಾಗಿ ದಿನಪತ್ರಿಕೆ ಓದಿ

ಬೆಳಿಗ್ಗೆ ಎದ್ದೊಡನೇ ವಿಜ್ಞಾನದ ಅದೂ ಡಿಜಿಟಲ್‌ನ ಮುಖ ನೋಡಬೇಕಾ? ಹಾಗಾದರೆ ದಿನಪತ್ರಿಕೆಯ ಡಿಜಿಟಲ್ ಅವತಾರವನ್ನು ಪ್ರೆಸ್‌ರೀಡರ್ ಅಪ್ಲಿಕೇಶನ್‌ನಲ್ಲಿ ಓದಬಹುದು. ಸ್ಮಾರ್ಟ್‌ಫೋನ್‌ನಲ್ಲಿ ಇದು ಲಭ್ಯವಿದ್ದರೂ ಟ್ಯಾಬ್ಲೆಟ್‌ನ ದೊಡ್ಡ ಪರದೆಯಲ್ಲಿ ಓದುವುದು ಇನ್ನೂ ಆರಾಮದಾಯಕ. ನಿಮಗೆ ಬೇಕಾದ ದಿನಪತ್ರಿಕೆಯ ಡಿಜಿಟಲ್ ರೂಪವನ್ನು ಟ್ಯಾಬ್ಲೆಟ್‌ನಲ್ಲಿ ಡೌನ್‌ಲೋಡ್ ಮಾಡಿ. ಬೇಕಾದ ಸುದ್ದಿಯನ್ನು ದೊಡ್ಡದು, ಸಣ್ಣದು ಮಾಡಬಹುದು. ಅದನ್ನು ಪ್ರಿಂಟ್ ಮಾಡಿ. ಇ-ಮೇಲ್‌ನಲ್ಲಿ ಸ್ನೇಹಿತರಿಗೆ ಕಳಿಸಿ. ಓದಲು ಬೇಸರವಾದರೆ ಓದಿ ಹೇಳುವ ಅಪ್ಲಿಕೇಶನ್ ಕೂಡಾ ಪಡೆಯಬಹುದು. ಅಮೆರಿಕ, ಇಂಗ್ಲೆಂಡ್‌ನ ದಿನಪತ್ರಿಕೆ, ನಿಯತಕಾಲಿಕಗಳ ವಿಷಯ ಬಿಡಿ, ಭಾರತದ ಕೆಲವು ಪ್ರಮುಖ ಇಂಗ್ಲಿಷ್ ದೈನಿಕಗಳು ಕೂಡಾ ಈ ಅಪ್ಲಿಕೇಶನ್‌ನಲ್ಲಿ ಲಭ್ಯ. ಆದರೆ ಒಂದು ಸೂಚನೆ- ಇವು ಉಚಿತ ಅಲ್ಲ. ಆರಂಭದಲ್ಲಿ ಉಚಿತವಾಗಿ ಓದಿದರೂ ಕೆಲವೊಂದು ಸಂಚಿಕೆಗಳ ನಂತರ ಚಂದಾ ನೀಡಬೇಕು. ಕಾಗದ ಹಾಗೂ ಪರಿಸರ ಪ್ರೇಮಿಗಳಾದರೆ ಡಿಜಿಟಲ್ ಆವೃತ್ತಿಗೆ ಚಂದಾದಾರರಾಗಿ. ಇನ್ನೊಂದು ಕಿವಿಮಾತು. ಈ ಡಿಜಿಟಲ್ ದೈನಿಕಗಳು ಬಹು ಭಾರ. ಅಂದರೆ ಸಂಗ್ರಹಿಸಲು ಹೊರಟರೆ ನಿಮ್ಮ ಟ್ಯಾಬ್ಲೆಟ್ ತಡೆದುಕೊಳ್ಳುವುದಿಲ್ಲ. ಆಗಾಗ ಅಳಿಸಿಹಾಕುವ ಕೆಲಸ ಮಾಡಿದರೆ ಒಳಿತು. ಐಪ್ಯಾಡ್, ಆ್ಯಂಡ್ರಾಯ್ಡ್ ಹನಿಕೂಂಬ್, ಬ್ಲ್ಯಾಕ್‌ಬೆರಿ ಪ್ಲೇಬುಕ್ ಇದ್ದರೆ ಪ್ರೆಸ್ ರೀಡರ್ ಅನ್ನು ಈಗಲೇ ಡೌನ್‌ಲೋಡ್ ಮಾಡಿಕೊಳ್ಳಿ.

## ಭಾರತದ ಗೇಮ್ ಜನಪ್ರಿಯ

ಮೊಬೈಲ್ ಗೇಮ್ ತೆಗೆದುಕೊಂಡರೆ ಭಾರತದ ಗೇಮ್ ಉನ್ನತ ಸ್ಥಾನದಲ್ಲಿ ನಿಲ್ಲುವುದು ಅಷ್ಟೊಂದು ಸುಲಭವಲ್ಲ. ಆದರೆ 'ಪಾರ್ಕಿಂಗ್ ಫ್ರೆಂಜಿ' ಸರಳವಾಗಿದ್ದರೂ ಅತ್ಯಂತ ಜನಪ್ರಿಯ. ಅದೂ ವಿಶೇಷ ಪರಿಣಾಮಗಳು ಮತ್ತು ಗ್ರಾಫಿಕ್ಸ್ ತೆಗೆದುಕೊಂಡರೆ ಇದು 'ಆ್ಯಂಗ್ರಿ ಬರ್ಡ್ಸ್', 'ಕಟ್ ದಿ ರೋಪ್'ಗೆ ಪೈಪೋಟಿ ನೀಡಬಹುದು.

ಈ ಗೇಮ್‌ನಲ್ಲಿ ಕನಿಷ್ಠ ತೊಂದರೆ ಎದುರಿಸಿ ನಿಮ್ಮ ಕಾರನ್ನು ಪಾರ್ಕ್ ಮಾಡಬೇಕು. ವಾಹನದೊಂದಿಗೆ ಶುರು ಮಾಡಿ. ಎಲ್ಲಿ ಪಾರ್ಕ್ ಮಾಡಬೇಕೆಂದು ನಿಮಗೆ ಸೂಚಿಸಲಾಗುತ್ತದೆ. ಆದರೆ ಮಾರ್ಗ ತೋರಿಸುವಾಗ ಕೀ ಬಳಸುವುದನ್ನು ಅಥವಾ ಕುಟ್ಟುವುದನ್ನು ಬಿಟ್ಟು ಇಲ್ಲಿ ನಿಮಗೆ ಆನ್‌ಸ್ಕ್ರೀನ್ ಸ್ಟೀಯರಿಂಗ್ ವ್ಹೀಲ್ ಇದೆ. ಇದನ್ನು ನಿಜವಾದ ಕಾರಿನ ಸ್ಟೀಯರಿಂಗ್ ತರಹ ಬಳಸಬಹುದು. ಜೊತೆಗೆ ವೇಗ ನಿಯಂತ್ರಣ ಸಾಧಿಸಬೇಕು. ರಿವರ್ಸ್ ಕೂಡಾ ಬರಬಹುದು. ದಿಣ್ಣೆ, ಬೇರೆ ಕಾರುಗಳು, ಪಾದಚಾರಿಗಳು (ಭಾರತದ ರಸ್ತೆಯ ಮೇಲೆ ಇವೆಲ್ಲ ಸಹಜ)... ಹೀಗೆ ಎಲ್ಲವನ್ನೂ ತಪ್ಪಿಸಿಕೊಳ್ಳಬೇಕು. ಈ ಅಪ್ಲಿಕೇಶನ್ ಆಂಡ್ರಾಯ್ಡ್‌ನಲ್ಲಿ ಉಚಿತ.

■ ಎಸ್.ತುಂಬೆ